**ಓ.ಎಸ್. ನಂ. 554/2013 ಪಿ.ಡಬ್ಲೂ-1 ಹೆಸರು - ನಾಗರಾಜು**

**ಸಾಕ್ಷಿಯನ್ನು ದಿನಾಂಕಃ 29/02/2024 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ. ಎನ್.ಎಸ್ 1 ನೇ ಪ್ರತಿವಾದಿ ಪರ ವಕೀಲರಿಂದಃ-**

ನಾನು ಈ ದಾವೆ ಸಲ್ಲಿಸುವ ಪೂರ್ವದಲ್ಲಿ ಚನ್ನಬಸಪ್ಪರವರು ಈ ದಾವೆಯ 1 ಮತ್ತು 3 ನೇ ಪ್ರತಿವಾದಿಯರ ವಿರುದ್ಧ ದಾವೆ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. 3 ನೇ ಪ್ರತಿವಾದಿಯನ್ನು ಏಕೆ ಪಕ್ಷಗಾರರನ್ನಾಗಿ ಮಾಡಿದ್ದೀರಿ ಎಂದು ಕೇಳಿದ್ದಕ್ಕೆ ಸಾಕ್ಷಿಯು 1 ನೇ ಪ್ರತಿವಾದಿಗೆ ಹಣ ನೀಡುತ್ತಾರೆ ಎಂದು ಪಕ್ಷಗಾರರನ್ನಾಗಿ ಮಾಡಿದ್ದೇನೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತನ್ನು 3 ನೇ ಪ್ರತಿವಾದಿ ಯಾವಾಗ ಸ್ವಾಧೀನಪಡಿಸಿಕೊಂಡಿದ್ದಾರೆ ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು ನೋಟಿಸನ್ನು ನನ್ನ ತಂದೆಗೆ ನೀಡಿದ್ದರು ಎಂದು ನುಡಿಯುತ್ತಾರೆ. ನನ್ನ ತಂದೆಗೆ 3 ನೇ ಪ್ರತಿವಾದಿ ನೋಟಿಸ್ ನೀಡಿದ್ದರು ಎಂದು ತೋರಿಸಲು ದಾಖಲಾತಿ ಹಾಜರುಪಡಿಸಬಹುದೇ ಎಂದು ಕೇಳಿದ್ದಕ್ಕೆ ಸಾಕ್ಷಿಯು ದಾಖಲಾತಿ ಕೋರಿದರೆ 3 ನೇ ಪ್ರತಿವಾದಿ ನೀಡುವುದಿಲ್ಲ ಎಂದು ಉತ್ತರಿಸುತ್ತಾರೆ. 3 ನೇ ಪ್ರತಿವಾದಿ ದಾಖಲಾತಿ ನೀಡುವುದಿಲ್ಲ ಎನ್ನುವುದಕ್ಕೆ ಯಾವುದೇ ಹಿಂಬರಹ ಹಾಜರುಪಡಿಸಿಲ್ಲ. ನಮ್ಮ ಜಮೀನನ್ನು ಸ್ವಾಧೀನಪಡಿಸಿಕೊಂಡಾಗ 3 ನೇ ಪ್ರತಿವಾದಿ 1 ಎಕರೆಗೆ 21 ಲಕ್ಷ ಪರಿಹಾರ ನಿರ್ಧರಿಸಿದ್ದರು. ನನ್ನ ತಂದೆ ತೀರಿ ಹೋದ ನಂತರ ಪರಿಹಾರದ ಹಣವನ್ನು ನಮಗೆ ನೀಡಿ ಎಂದು 3 ನೇ ಪ್ರತಿವಾದಿಗೆ ಅರ್ಜಿ ನೀಡಿಲ್ಲ. ಸಾಕ್ಷಿ ಮುಂದುವರೆದು ನೇರವಾಗಿ ನ್ಯಾಯಾಲಯಕ್ಕೆ ದಾವೆ ಸಲ್ಲಿಸಿದ್ದೇನೆ ಎಂದು ನುಡಿಯುತ್ತಾರೆ. 3 ನೇ ಪ್ರತಿವಾದಿ ಪರಿಹಾರದ ಹಣವನ್ನು ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯದಲ್ಲಿ ಕಟ್ಟಿದ್ದಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

( ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.)

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

**ಓ ಹೇ ಕೇ ಸ ಇದೆ ಎಂ ಒ**

ಸಹಿ/-

**1 ನೇ ಹೆಚ್ಚುವರಿ ಸಿ.ಜೆ ಮತ್ತು ಪ್ರದನ್ಯಾದಂ**

**ನಂಜನಗೂಡು**